ಜನಮಾಧ್ಯಮ

## ಅಂತಾರಾಷ್ಟ್ರೀಯ ಜೀವ ವೈವಿಧ್ಯ ದಿನಾಚರಣೆ

# ಎಲ್ಲ ಪರಿಹಾರಗಳು ನಿಸರ್ಗದಲ್ಲಿಯೇ ಇವೆ: ಎಸಿಎಫ್

**ಜನಮಾಧ್ಯಮ, ಅಂಕೋಲಾ:** ಅಂತರಾಷ್ಟ್ರೀಯ ಜೀವ ವೈವಿಧ್ಯತಾ ದಿನಾಚರಣೆಯನ್ನು ಮಾಸ್ತಿಕಟ್ಟಾ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಆವರಣದಲ್ಲಿ ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು. ಪಕ್ಷಿಗಳಿಗೆ ಇಡಲಾದ ತೊಟ್ಟಿಗೆ ನೀರು ತುಂಬಿಸುವ ಮೂಲಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ನಾವೆ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ ಮನುಷ್ಯನ ದುರಾಸೆಯಿಂದಾಗಿ ಕಾಡು ಸಂಪತ್ತು ನಾಶವಾಗುತ್ತಿದೆ ಅಲ್ಲದೇ ಪ್ರಾಣಿ ಪಕ್ಷಿ ಮತ್ತು ಜಲಚರ ವಾಸಿಗಳಿಗೆ ಅಪಾಯ ಎನಿಸಿದೆ. ಪರಿಸರದ ಅಸಮತೋಲನದಿಂದ ಅತಿವೃಷ್ಠಿ ಅನಾವೃಷ್ಠಿ ನಾವೆಲ್ಲರೂ ಸಹಬಾಳ್ವೆಯ ಮಹತ್ವ ಅರಿತು ಎಲ್ಲ ಪರಿಹಾರಗಳು ನಿಸರ್ಗದಲ್ಲಿಯೇ ಇವೆ ಎಂದು ತಿಳಿದು ಜೀವ ವೈವಿಧ್ಯತೆ ಸಾರುವ ದಿನ ಇದಾಗಿದೆ



ಎಂದರು.

ಮಾಸ್ತಿಕಟ್ಟೆ ವಲಯ ಅರಣ್ಯಾಧಿಕಾರಿ ರಾಘವೇಂದ್ರ ಸ್ವಾಗತಿಸಿ, ನಿಸರ್ಗದ ಮಹತ್ವ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ವಲಯ ಅರಣ್ಯಾಧಿಕಾರಿಗಳಾದ ವಿ.ಪಿ.ನಾಯ್ಕ ಅಂಕೋಲಾ, ಕೆ.ಡಿ.ನಾಯಕ ಹಟ್ಟಿಕೇರಿ, ಲೋಕೇಶ ಪಾಠನಕರ್ ಹಾಗೂ ಉಪ ವಲಯರಣ್ಯಾದಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.